# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 779 |
| ಉತ್ತರಿಸಬೇಕಾದ ದಿನಾಂಕ | : 13.03.2025 |
| ಸದಸ್ಯರ ಹೆಸರು | : ಶ್ರೀ ಐವನ್ ಡಿ'ಸೋಜಾ (ವಿಧಾನ ಸಭಾ ಕ್ಷೇತ್ರ) |
| ಉತ್ತರಿಸುವ ಸಚಿವರು | : ಮಾನ್ಯ ಮುಖ್ಯಮಂತ್ರಿಯವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ ಅಂತಾರಾಷ್ಟ್ರೀಯ ಮಟ್ಟದ ಕ್ರಿಕೆಟ್ ಕ್ರೀಡಾಂಗಣವನ್ನು ಸ್ಥಾಪಿಸಲು ಕೈಗೊಂಡಿರುವ ಕ್ರಮಗಳೇನು; ಈ ಬಗ್ಗೆ ಸ್ಥಳವನ್ನು ಪರಿಶೀಲಿಸಲಾಗಿದೆಯೇ; ಖಾಸಗಿಯವರ ಸಹಭಾಗಿತ್ವವನ್ನು ಸ್ಥಾಪಿಸಲು ಯೋಚಿಸಿದೆಯೇ; (ವಿವರ ನೀಡುವುದು) | ಕ್ರಿಕೆಟ್ ಕ್ರೀಡಾಂಗಣ ನಿರ್ಮಾಣಕ್ಕಾಗಿ ಮಂಗಳೂರು ತಾಲ್ಲೂಕು ಕಾವೂರು ಗ್ರಾಮದ ಸರ್ವೆ ಸಂಖ್ಯೆ-112/1ಎ ರಲ್ಲಿ 0.83 ಎಕರೆ, 139/1 ರಲ್ಲಿ 0.49 ಎಕರೆ, 142/2 ರಲ್ಲಿ 0.47 ಎಕರೆ, 138 ರಲ್ಲಿ 0.83 ಎಕರೆ ಮತ್ತು 21 ರಲ್ಲಿ 6.97 ಎಕರೆ ಸೇರಿದಂತೆ ಒಟ್ಟು 9.59 ಎಕರೆ ಜಮೀನನ್ನು ಸಹಾಯಕ ಆಯುಕ್ತರು, ಮಂಗಳೂರು ಉಪ ವಿಭಾಗ, ಮಂಗಳೂರು ರವರ ಕಛೇರಿ ನಡವಳಿ ಸಂಖ್ಯೆ; ಎಡಿಸ್.ಎಲ್.ಎನ್.ಡಿ.ಪಿ.ಡಿ.ಆರ್.107/2021/ಇ-128540, ದಿನಾಂಕ:23-02-2021 ರಂತೆ ಇಲಾಖೆಯ ಹೆಸರಿಗೆ ಕಾಯ್ದಿರಿಸಲಾಗಿರುತ್ತದೆ. ದಿನಾಂಕ:14-09-2021 ರಂದು ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕ್ರಿಕೆಟ್ ಕ್ರೀಡಾಂಗಣ ಅಭಿವೃದ್ಧಿಪಡಿಸುವ ಸಂಬಂಧ ತಗಲುವ ವೆಚ್ಚವನ್ನು ದಕ್ಷಿಣ ಕನ್ನಡ ಕ್ರಿಕೆಟ್ ಸಂಸ್ಥೆಯು ಭರಿಸುವುದಾಗಿ ಒಪ್ಪಿಕೊಂಡಿರುತ್ತದೆ. ಅದರಂತೆ, ದಕ್ಷಿಣ ಕನ್ನಡ ಕ್ರಿಕೆಟ್ ಸಂಸ್ಥೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ದಕ್ಷಿಣ ಕನ್ನಡ ಜಿಲ್ಲಾಡಳಿತ ತಮ್ಮೊಳಗೆ ಒಡಂಬಡಿಕೆ ಮಾಡಿಕೊಂಡು, ಕ್ರೀಡಾಂಗಣದ ಅಭಿವೃದ್ಧಿಗೆ ಎಲ್ಲಾ ರೀತಿಯ ಕ್ರಮಗಳನ್ನು ಹಾಗೂ ದೈನಂದಿನ ಚಟುವಟಿಕೆಗಳನ್ನು ದಕ್ಷಿಣ ಕನ್ನಡ ಕ್ರಿಕೆಟ್ ಸಂಘಟನೆಯ ಕಾರ್ಯಕಾರಿ ಸಮಿತಿಯವರು ನಿರ್ವಹಿಸುವಂತೆ ತಿಳಿಸಲಾಗಿರುತ್ತದೆ.<br><br>ಕ್ರಿಕೆಟ್ ಕ್ರೀಡಾಂಗಣ ನಿರ್ಮಾಣಕ್ಕೆ ಕಾಯ್ದಿರಿಸಲಾದ ಜಮೀನಿನ ಪಕ್ಕದಲ್ಲಿರುವ ಮನೆಗಳಿಗೆ ಬದಲಿ ಸಂಪರ್ಕ ರಸ್ತೆಯನ್ನು ಮಂಗಳೂರು ಮಹಾನಗರ ಪಾಲಿಕೆ ವತಿಯಿಂದ ನಿರ್ಮಾಣ ಮಾಡಲಾಗುತ್ತಿದೆ. ಸದರಿ ಮನೆಗಳಿಗೆ ಬದಲಿ ಸಂಪರ್ಕ ರಸ್ತೆಯನ್ನು ಒದಗಿಸಿದ ನಂತರ, ಅನುದಾನ ಲಭ್ಯತೆಯ ಆಧಾರದ ಮೇಲೆ ಅಥವಾ ದಕ್ಷಿಣ ಕನ್ನಡ ಕ್ರಿಕೆಟ್ ಸಂಘಟನೆಯ ಮೂಲಕ ಕ್ರೀಡಾಂಗಣವನ್ನು ಅಭಿವೃದ್ಧಿಪಡಿಸಲು ಕ್ರಮವಹಿಸಲಾಗುವುದು. |
| ಆ) | ದೇಶದ ಸಣ್ಣ ರಾಜ್ಯಗಳಲ್ಲಿಯೂ ಒಂದಕ್ಕಿಂತಲೂ ಹೆಚ್ಚು ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಂಗಣ ಇದ್ದು, ನಮ್ಮ ರಾಜ್ಯದಲ್ಲಿ ಈ ಬಗ್ಗೆ ನಿರ್ಲಕ್ಷ್ಯಧೋರಣೆ ಅನುಸರಿಸುತ್ತಿರುವುದು ಕ್ರೀಡಾಪಟುಗಳು ಅವಕಾಶದಿಂದ ವಂಚಿತರಾಗುವುದು | ಬಂದಿದೆ.<br><br>ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ರಾಜ್ಯಾದಾದ್ಯಂತ 29 ಜಿಲ್ಲಾ ಕ್ರೀಡಾಂಗಣಗಳು ಹಾಗೂ 125 ತಾಲ್ಲೂಕು ಕ್ರೀಡಾಂಗಣಗಳನ್ನು ನಿರ್ಮಿಸಲಾಗಿರುತ್ತದೆ. ಸದರಿ ಕ್ರೀಡಾಂಗಣದಲ್ಲಿ 34 ಈಜುಕೊಳಗಳನ್ನು, 20 ಅಂತಾರಾಷ್ಟ್ರೀಯ ಮಟ್ಟದ ಸಿಂಥೆಟಿಕ್ ಅಥ್ಲೆಟಿಕ್ ಟ್ರ್ಯಾಕ್, 08 ಅಂತಾರಾಷ್ಟ್ರೀಯ ಮಟ್ಟದ ಸಿಂಥೆಟಿಕ್ ಹಾಕಿ ಟರ್ಫ್ ಮತ್ತು 03 |

<table>
<tr><td></td><td>ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು)</td><td>ಅಂತಾರಾಷ್ಟ್ರೀಯ ಮಟ್ಟದ ಸಿಂಥೆಟಿಕ್ ಫುಟ್‌ಬಾಲ್ ಟರ್ಫ್‌ಗಳನ್ನು ನಿರ್ಮಿಸಲಾಗಿದ್ದು, ಕ್ರೀಡಾಪಟುಗಳ ಬಳಕೆಗೆ ಒದಗಿಸಲಾಗಿದೆ.<br><br>ಬಾಕಿ ಇರುವ ಜಿಲ್ಲೆ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಹಂತ-ಹಂತವಾಗಿ ತಾಲ್ಲೂಕು ಕ್ರೀಡಾಂಗಣಗಳನ್ನು ನಿರ್ಮಿಸಿ, ಕ್ರೀಡಾಪಟುಗಳ ಬಳಕೆಗೆ ಒದಗಿಸಲಾಗುವುದು.</td></tr>
<tr><td>ಇ)</td><td>ರಾಜ್ಯದ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಸುಸಜ್ಜಿತ ಮೈದಾನವನ್ನು ಸ್ಥಾಪಿಸಬೇಕೆಂದು ಸರ್ಕಾರದ ನಿಲುವು ಎಷ್ಟರಮಟ್ಟಿಗೆ ಸಾಧನೆ ಮಾಡಿದೆ; (ಜಿಲ್ಲಾವಾರು ವಿವರ ನೀಡುವುದು)</td><td>ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಪ್ರಸ್ತುತ ಕ್ರೀಡಾಂಗಣಗಳಿಲ್ಲದಿರುವ ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಕ್ರೀಡಾಂಗಣಗಳನ್ನು ನಿರ್ಮಿಸಲು ಆದ್ಯತೆ ನೀಡಲಾಗುತ್ತಿದೆ.<br><br>ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ ಇದುವರೆಗೂ ಒಟ್ಟು 125 ತಾಲ್ಲೂಕು ಕ್ರೀಡಾಂಗಣಗಳನ್ನು ನಿರ್ಮಿಸಲಾಗಿರುತ್ತದೆ ಹಾಗೂ 75 ತಾಲ್ಲೂಕು ಕ್ರೀಡಾಂಗಣಗಳನ್ನು ನಿರ್ಮಿಸಬೇಕಾಗಿರುತ್ತದೆ. ವಿವರವನ್ನು ಅನುಬಂಧ-1 ಮತ್ತು ಅನುಬಂಧ-2 ರಲ್ಲಿ ನೀಡಲಾಗಿದೆ.</td></tr>
<tr><td>ಈ)</td><td>ರಾಜ್ಯದಿಂದ ಎಷ್ಟು ಕ್ರೀಡಾಳುಗಳು 'ಒಲಂಪಿಕ್ಸ್' ನಲ್ಲಿ ಭಾಗವಹಿಸಲು ಅರ್ಹತೆ ಪಡೆದು ವಿಜೇತರಾಗಿದ್ದಾರೆ; ಈ ಬಗ್ಗೆ ಇಲಾಖೆ ಕೈಗೊಂಡಿರುವ ಮುತುವರ್ಜಿ ಏನು; (ವಿವರ ನೀಡುವುದು)</td><td>ಪ್ಯಾರಿಸ್‌ನಲ್ಲಿ ನಡೆದಂತಹ ಒಲಂಪಿಕ್ಸ್ ಮತ್ತು ಪ್ಯಾರಾ ಒಲಂಪಿಕ್ಸ್ ಕ್ರೀಡಾಕೂಟದಲ್ಲಿ ಕರ್ನಾಟಕದಿಂದ ಭಾಗವಹಿಸಿದ ಒಟ್ಟು ಕ್ರೀಡಾಪಟುಗಳ ಸಂಖ್ಯೆ 12.<br><br>ಕ್ರೀಡಾಪಟುಗಳ ವಿವರ ಇಂತಿದೆ:<br><br>
<table>
<tr><th>ಕ್ರ. ಸಂ.</th><th>ಕ್ರೀಡಾಪಟುವಿನ ಹೆಸರು (ಶ್ರೀ/ಶ್ರೀಮತಿ)</th><th>ಕ್ರೀಡೆ</th></tr>
<tr><td>1</td><td>ರೋಹನ್ ಬೋಪಣ್ಣ</td><td>ಟೆನ್ನಿಸ್</td></tr>
<tr><td>2</td><td>ಅಶ್ವಿನಿ ಪೊನ್ನಪ್ಪ</td><td>ಬ್ಯಾಡ್ಮಿಂಟನ್</td></tr>
<tr><td>3</td><td>ಎಂ.ಆರ್. ಪೂವಮ್ಮ</td><td>4*4 ಮಹಿಳೆಯರ ವಿಭಾಗದ ರಿಲೇ</td></tr>
<tr><td>4</td><td>ಅದಿತಿ ಅಶೋಕ್</td><td>ಗಾಲ್ಫ್</td></tr>
<tr><td>5</td><td>ಶ್ರೀಹರಿ ನಟರಾಜ್</td><td>ಈಜು</td></tr>
<tr><td>6</td><td>ಮಿಜಾ ಚಾಕೋ</td><td>4*4 ಪುರುಷರ ವಿಭಾಗದ ರಿಲೇ</td></tr>
<tr><td>7</td><td>ನಿಶಾಂತ್ ದೇವ್</td><td>ಬಾಕ್ಸಿಂಗ್</td></tr>
<tr><td>8</td><td>ಅರ್ಚನಾ ಜಿ ಕಾಮತ್</td><td>ಟೇಬಲ್ ಟೆನ್ನಿಸ್</td></tr>
<tr><td>9</td><td>ಧಿನಿಧಿ ದೇಸಿಂಗೂ</td><td>ಈಜು</td></tr>
<tr><td>10</td><td>ರಕ್ಷಿತ ರಾಜು</td><td>ಪ್ಯಾರಾ ಅಥ್ಲೆಟಿಕ್</td></tr>
<tr><td>11</td><td>ಸಕೀನಾ ಖಾತುನ್</td><td>ಪ್ಯಾರಾ ಪವರ್ ಲಿಫ್ಟಿಂಗ್</td></tr>
<tr><td>12</td><td>ಹರ್ಷ ದೇವರೆಡ್ಡಿ</td><td>ಪ್ಯಾರಾ ಶೂಟಿಂಗ್</td></tr>
</table>
<br>ಮೇಲ್ಕಂಡಂತೆ ಪ್ಯಾರಿಸ್ ಒಲಂಪಿಕ್ಸ್-2024ರ ಕ್ರೀಡಾಕೂಟಕ್ಕೆ ಆಯ್ಕೆಯಾದ ಒಟ್ಟು 12 ಕ್ರೀಡಾಪಟುಗಳಿಗೆ ಸರ್ಕಾರದಿಂದ ತಲಾ ರೂ.5.00 ಲಕ್ಷಗಳಂತೆ ಪ್ರೋತ್ಸಾಹ ಧನವನ್ನು ನೀಡಲಾಗಿರುತ್ತದೆ.</td></tr>
</table>

<table>
<tr>
<td></td>
<td></td>
<td>
ಅಮೃತ ಕ್ರೀಡಾದತ್ತು ಯೋಜನೆಯಡಿ ಪ್ಯಾರಿಸ್ ಒಲಂಪಿಕ್ಸ್ ಕ್ರೀಡಾಕೂಟದಲ್ಲಿ ಉತ್ತಮ ಸಾಧನೆ ತೋರಿ ಪದಕ ವಿಜೇತ ಸಾಮರ್ಥ್ಯವುಳ್ಳ ಆಯ್ದ 75 ಕ್ರೀಡಾಪಟುಗಳನ್ನು ಆಯ್ಕೆ ಮಾಡಿ, ಅವರುಗಳಿಗೆ ಅಗತ್ಯವಾದ ತರಬೇತಿ ಮತ್ತು ಪ್ರೋತ್ಸಾಹ ಕಲ್ಪಿಸುವ ನಿಟ್ಟಿನಲ್ಲಿ 2021-22ನೇ ಸಾಲಿನಲ್ಲಿ ತಲಾ ರೂ.5.00 ಲಕ್ಷಗಳಂತೆ ಹಾಗೂ 2022-23 ಮತ್ತು 2023-24ನೇ ಸಾಲಿನಲ್ಲಿ ತಲಾ ರೂ.10.00 ಲಕ್ಷಗಳ ಪ್ರೋತ್ಸಾಹ ಧನವನ್ನು ನೀಡಲಾಗಿರುತ್ತದೆ.
<table>
<tr><th>ಕ್ರ. ಸಂ.</th><th>ಕ್ರೀಡಾಪಟುವಿನ ಹೆಸರು (ಶ್ರೀ/ ಶ್ರೀಮತಿ</th><th>ಕ್ರೀಡೆ</th><th>2021-2022</th><th>2022-2023</th><th>2023-2024</th></tr>
<tr><td>1</td><td>ಅಶ್ವಿನಿ ಪೊನ್ನಪ್ಪ</td><td>ಬ್ಯಾಡ್ಮಿಂಟನ್</td><td>5.00</td><td>10.00</td><td>10.00</td></tr>
<tr><td>2</td><td>ಅದಿತಿ ಅಶೋಕ್</td><td>ಗಾಲ್ಫ್</td><td>5.00</td><td>10.00</td><td>10.00</td></tr>
<tr><td>3</td><td>ಶ್ರೀಹರಿ ನಟರಾಜ್</td><td>ಈಜು</td><td>5.00</td><td>10.00</td><td>10.00</td></tr>
<tr><td>4</td><td>ಅರ್ಚನಾ ಜಿ ಕಾಮತ್</td><td>ಟೇಬಲ್ ಟೆನ್ನಿಸ್</td><td>5.00</td><td>10.00</td><td>10.00</td></tr>
<tr><td>5</td><td>ರಕ್ಷಿತ ರಾಜು</td><td>ಪ್ಯಾರಾ ಅಥ್ಲೆಟಿಕ್</td><td>5.00</td><td>10.00</td><td>10.00</td></tr>
<tr><td>6</td><td>ಸಕೀನಾ ಖಾತುನ್</td><td>ಪ್ಯಾರಾ ಪವರ್ ಲಿಫ್ಟಿಂಗ್</td><td>5.00</td><td>10.00</td><td>10.00</td></tr>
<tr><td>7</td><td>ಮಿಜಾ ಚಾಕೋ</td><td>ಅಥ್ಲೆಟಿಕ್ಸ್ (4*4 ಪುರುಷರ ವಿಭಾಗದ ರಿಲೇ )</td><td>---</td><td>10.00</td><td>10.00</td></tr>
<tr><td>8</td><td>ನಿಶಾಂತ್ ದೇವ್</td><td>ಬಾಕ್ಸಿಂಗ್</td><td>---</td><td>10.00</td><td>10.00</td></tr>
</table>
ಮೇಲ್ಕಂಡ ಕ್ರೀಡಾಪಟುಗಳಲ್ಲಿ ಶ್ರೀ ರೋಹನ್ ಬೋಪಣ್ಣ, ಶ್ರೀಮತಿ ಎಂ.ಆರ್. ಪೂವಮ್ಮ, ಕುಮಾರಿ ಧಿನಿಧಿ ದೇಸಿಂಗೂ, ಮತ್ತು ಶ್ರೀ ಹರ್ಷ ದೇವರೆಡ್ಡಿ, ಇವರುಗಳನ್ನು ಹೊರತುಪಡಿಸಿ ಉಳಿದ ಕ್ರೀಡಾಪಟುಗಳು ಅಮೃತದತ್ತು ಕ್ರೀಡಾ ಯೋಜನೆಯ ಫಲಾನುಭವಿಗಳಾಗಿರುತ್ತಾರೆ.
</td>
</tr>
<tr>
<td>ಊ)</td>
<td>ರಾಜ್ಯದ ಕ್ರೀಡಾಳುಗಳಿಗೆ ಒದಗಿಸುವ ಕೋಚ್‌ಗಳಿಗೆ ಜವಾಬ್ದಾರಿಯನ್ನು ವಹಿಸಲಾಗಿದೆಯೇ; ಈ ಬಗ್ಗೆ ನಿಯತಕಾಲಿಕವಾಗಿ ವಿಮರ್ಶೆ ಮಾಡಲಾಗಿದೆಯೇ; (ವಿವರ ನೀಡುವುದು)</td>
<td>
ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ತರಬೇತುದಾರರಿಗೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವ್ಯಾಪ್ತಿಯಲ್ಲಿರುವ ಕ್ರೀಡಾ ವಸತಿ ನಿಲಯದ ಕ್ರೀಡಾಪಟುಗಳಿಗೆ ಮತ್ತು ಜಿಲ್ಲಾ ಕ್ರೀಡಾಂಗಣಗಳಲ್ಲಿ ತರಬೇತಿ ಪಡೆಯುವ ಕ್ರೀಡಾಪಟುಗಳಿಗೆ ವೈಜ್ಞಾನಿಕ ತರಬೇತಿ ನೀಡುವ ಜವಾಬ್ದಾರಿಯನ್ನು ನೀಡಲಾಗಿದೆ. ರಾಜ್ಯ ಮತ್ತು ರಾಷ್ಟ್ರ ಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸುವ ಕ್ರೀಡಾಪಟುಗಳನ್ನು ಕರೆದುಕೊಂಡು ಹೋಗಲು ಮಾನ್ಯತೆ ಪಡೆದ ರಾಜ್ಯ ಕ್ರೀಡಾ ಸಂಸ್ಥೆಗಳು, ಮಾನ್ಯತೆ ಪಡೆಯದ ಇತರೆ ಕ್ರೀಡಾ ಸಂಸ್ಥೆಗಳು ಹಾಗೂ ಇಲಾಖಾ ಕ್ರೀಡಾ /ಇತರೆ ಕಾರ್ಯಕ್ರಮಗಳ ಸಂಘಟನೆಗೆ ನಿಯೋಜಿಸಲಾಗುತ್ತಿದೆ.<br><br>
ವಿವಿಧ ಜಿಲ್ಲೆಯ ಉಪ/ಸಹಾಯಕ ನಿರ್ದೇಶಕರು,
</td>
</tr>
</table>

| | | |
|---|---|---|
| | | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಕಚೇರಿಯಲ್ಲಿ ತರಬೇತುದಾರರು ಕಾರ್ಯನಿರ್ವಹಿಸುತ್ತಿದ್ದು, ತರಬೇತುದಾರರ ತರಬೇತಿ ಕಾರ್ಯದ ಮೇಲುಸ್ತುವಾರಿಯನ್ನು ಆಯಾ ಜಿಲ್ಲೆಯ ಉಪ/ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರಿಗೆ ವಹಿಸಲಾಗಿದೆ. ಸದರಿ ತರಬೇತುದಾರರ ತರಬೇತಿ ಕಾರ್ಯದ ದಿನಚರಿಯನ್ನು ಆಯಾ ಜಿಲ್ಲೆಯ ಉಪ/ಸಹಾಯಕ ನಿರ್ದೇಶಕರು ದೃಢೀಕರಣದೊಂದಿಗೆ ಕೇಂದ್ರ ಕಛೇರಿಗೆ ಕಳುಹಿಸುತ್ತಿದ್ದು, ಸದರಿ ದಿನಚರಿಗಳನ್ನು ಕೇಂದ್ರ ಕಚೇರಿಯಲ್ಲಿ ಪರಿಶೀಲಿಸಲಾಗುವ ಮೂಲಕ ವಿಮರ್ಶೆ ಮಾಡಲಾಗುತ್ತಿದೆ. |

**ವೈಎಸ್ ಡಿ-ಇಬಿಬಿ/41/2025**

**(ಸಿದ್ದರಾಮಯ್ಯ)**
ಮುಖ್ಯಮಂತ್ರಿ

# ಅನುಬಂಧ-1

## ಪೂರ್ಣಗೊಂಡಿರುವ ತಾಲ್ಲೂಕು ಕ್ರೀಡಾಂಗಣಗಳ ವಿವರ

| ಕ್ರ. ಸಂ. | ಜಿಲ್ಲೆ | ತಾಲ್ಲೂಕು |
|---|---|---|
| 1. | ಬೆಂಗಳೂರು ಗ್ರಾಮಾಂತರ | ದೇವನಹಳ್ಳಿ |
| 2. | ಬೆಂಗಳೂರು ಗ್ರಾಮಾಂತರ | ದೊಡ್ಡಬಳ್ಳಾಪುರ |
| 3. | ಬೆಂಗಳೂರು ಗ್ರಾಮಾಂತರ | ಹೊಸಕೋಟೆ |
| 4. | ಬೆಂಗಳೂರು ಗ್ರಾಮಾಂತರ | ನೆಲಮಂಗಲ |
| 5. | ಬೆಂಗಳೂರು ನಗರ | ಆನೇಕಲ್ |
| 6. | ಬೆಂಗಳೂರು ನಗರ | ಬೆಂಗಳೂರು ದಕ್ಷಿಣ (ಹೊನ್ನಗಾನಹಟ್ಟಿ) |
| 7. | ಬೆಂಗಳೂರು ನಗರ | ಬೆಂಗಳೂರು ಉತ್ತರ (ರಾವುತ್ತನಹಳ್ಳಿ) |
| 8. | ಬಾಗಲಕೋಟೆ | ಬೀಳಗಿ |
| 9. | ಬಾಗಲಕೋಟೆ | ಹುನಗುಂದ |
| 10. | ಬಾಗಲಕೋಟೆ | ಜಮಖಂಡಿ |
| 11. | ಬಾಗಲಕೋಟೆ | ಮುಧೋಳ |
| 12. | ಬಾಗಲಕೋಟೆ | ಇಳಕಲ್ |
| 13. | ಬಳ್ಳಾರಿ | ಸಿರಗುಪ್ಪ |
| 14. | ಬಳ್ಳಾರಿ | ಸಂಡೂರು |
| 15. | ಬಳ್ಳಾರಿ | ಕೊಟ್ಟೂರು |
| 16. | ಬೆಳಗಾವಿ | ಅಥಣಿ |
| 17. | ಬೆಳಗಾವಿ | ಬೈಲಹೊಂಗಲ |
| 18. | ಬೆಳಗಾವಿ | ಚಿಕ್ಕೋಡಿ |
| 19. | ಬೆಳಗಾವಿ | ಗೋಕಾಕ |
| 20. | ಬೆಳಗಾವಿ | ಹುಕ್ಕೇರಿ |
| 21. | ಬೆಳಗಾವಿ | ರಾಯಭಾಗ |
| 22. | ಬೆಳಗಾವಿ | ಸವದತ್ತಿ |
| 23. | ಬೆಳಗಾವಿ | ಖಾನಾಪುರ |
| 24. | ಬೀದರ | ಬಸವಕಲ್ಯಾಣ |
| 25. | ಬೀದರ | ಔರಾದ್ |
| 26. | ಬೀದರ | ಹುಮ್ನಾಬಾದ್ |
| 27. | ಚಾಮರಾಜನಗರ | ಗುಂಡ್ಲುಪೇಟೆ |
| 28. | ಚಾಮರಾಜನಗರ | ಕೊಳ್ಳೇಗಾಲ |
| 29. | ಚಾಮರಾಜನಗರ | ಹನೂರು |
| 30. | ಚಿಕ್ಕಬಳ್ಳಾಪುರ | ಬಾಗೇಪಲ್ಲಿ |
| 31. | ಚಿಕ್ಕಬಳ್ಳಾಪುರ | ಚಿಂತಾಮಣಿ |
| 32. | ಚಿಕ್ಕಬಳ್ಳಾಪುರ | ಗೌರಿಬಿದನೂರು |
| 33. | ಚಿಕ್ಕಬಳ್ಳಾಪುರ | ಶಿಡ್ಲಘಟ್ಟ |
| 34. | ಚಿಕ್ಕಮಗಳೂರು | ಕಡೂರು |
| 35. | ಚಿಕ್ಕಮಗಳೂರು | ಮೂಡಿಗೆರೆ |
| 36. | ಚಿಕ್ಕಮಗಳೂರು | ನರಸಿಂಹರಾಜಪುರ |
| 37. | ಚಿತ್ರದುರ್ಗ | ಚಳ್ಳಕೆರೆ |
| 38. | ಚಿತ್ರದುರ್ಗ | ಹಿರಿಯೂರು |
| 39. | ಚಿತ್ರದುರ್ಗ | ಹೊಸದುರ್ಗ |
| 40. | ದಕ್ಷಿಣ ಕನ್ನಡ | ಬೆಳ್ತಂಗಡಿ |
| 41. | ದಕ್ಷಿಣ ಕನ್ನಡ | ಪುತ್ತೂರು |
| 42. | ದಕ್ಷಿಣ ಕನ್ನಡ | ಸುಳ್ಯ |

| | | |
|---|---|---|
| 43. | ದಕ್ಷಿಣ ಕನ್ನಡ | ಮೂಡಬಿದರೆ |
| 44. | ದಾವಣಗೆರೆ | ಚನ್ನಗಿರಿ |
| 45. | ದಾವಣಗೆರೆ | ಹರಿಹರ |
| 46. | ದಾವಣಗೆರೆ | ಹೊನ್ನಾಳಿ |
| 47. | ದಾವಣಗೆರೆ | ಜಗಳೂರು |
| 48. | ಧಾರವಾಡ | ಅಳ್ನಾವರ |
| 49. | ಗದಗ | ಮುಂಡರಗಿ |
| 50. | ಗದಗ | ನರಗುಂದ |
| 51. | ಗದಗ | ರೋಣ |
| 52. | ಗದಗ | ಶಿರಹಟ್ಟಿ |
| 53. | ಹಾಸನ | ಆಲೂರು |
| 54. | ಹಾಸನ | ಅರಸೀಕೆರೆ |
| 55. | ಹಾಸನ | ಅರಕಲಗೂಡು |
| 56. | ಹಾಸನ | ಬೇಲೂರು |
| 57. | ಹಾಸನ | ಚನ್ನರಾಯಪಟ್ಟಣ |
| 58. | ಹಾಸನ | ಹೊಳೆನರಸೀಪುರ |
| 59. | ಹಾಸನ | ಸಕಲೇಶಪುರ |
| 60. | ಹಾವೇರಿ | ಬ್ಯಾಡಗಿ |
| 61. | ಹಾವೇರಿ | ಹಾನಗಲ್ |
| 62. | ಹಾವೇರಿ | ಹಿರೇಕೆರೂರು |
| 63. | ಹಾವೇರಿ | ರಾಣೇಬೆನ್ನೂರು |
| 64. | ಹಾವೇರಿ | ಸವಣೂರು |
| 65. | ಹಾವೇರಿ | ಶಿಗ್ಗಾಂವ್ |
| 66. | ಕಲಬುರಗಿ | ಆಲಂದ |
| 67. | ಕಲಬುರಗಿ | ಚಿಂಚೋಳಿ |
| 68. | ಕಲಬುರಗಿ | ಚಿತ್ತಾಪೂರ |
| 69. | ಕಲಬುರಗಿ | ಜೇವರ್ಗಿ |
| 70. | ಕಲಬುರಗಿ | ಸೇಡಂ |
| 71. | ಕೊಡಗು | ಸೋಮವಾರಪೇಟೆ |
| 72. | ಕೊಡಗು | ಪೊನ್ನಂಪೇಟೆ |
| 73. | ಕೋಲಾರ | ಬಂಗಾರಪೇಟೆ |
| 74. | ಕೋಲಾರ | ಮಾಲೂರು |
| 75. | ಕೋಲಾರ | ಮುಳಬಾಗಿಲು |
| 76. | ಕೋಲಾರ | ಶ್ರೀನಿವಾಸಪುರ |
| 77. | ಕೊಪ್ಪಳ | ಕೊಪ್ಪಳ |
| 78. | ಕೊಪ್ಪಳ | ಗಂಗಾವತಿ |
| 79. | ಕೊಪ್ಪಳ | ಕುಷ್ಟಗಿ |
| 80. | ಕೊಪ್ಪಳ | ಯಲಬುರ್ಗ |
| 81. | ಮಂಡ್ಯ | ಕೆ.ಆರ್.ಪೇಟೆ |
| 82. | ಮಂಡ್ಯ | ಮದ್ದೂರು |
| 83. | ಮಂಡ್ಯ | ಮಳವಳ್ಳಿ |
| 84. | ಮಂಡ್ಯ | ನಾಗಮಂಗಲ |
| 85. | ಮಂಡ್ಯ | ಪಾಂಡವಪುರ |
| 86. | ಮಂಡ್ಯ | ಶ್ರೀರಂಗಪಟ್ಟಣ |
| 87. | ಮೈಸೂರು | ಹೆಗ್ಗಡದೇವನಕೋಟೆ |
| 88. | ಮೈಸೂರು | ಹುಣಸೂರು |
| 89. | ಮೈಸೂರು | ಕೃಷ್ಣರಾಜನಗರ |

| | | |
|---|---|---|
| 90. | ಮೈಸೂರು | ನಂಜನಗೂಡು |
| 91. | ಮೈಸೂರು | ಪಿರಿಯಾಪಟ್ಟಣ |
| 92. | ರಾಮನಗರ | ಕನಕಪುರ |
| 93. | ರಾಯಚೂರು | ದೇವದುರ್ಗ |
| 94. | ರಾಯಚೂರು | ಸಿಂಧನೂರು |
| 95. | ರಾಯಚೂರು | ಲಿಂಗಸಗೂರು |
| 96. | ಶಿವಮೊಗ್ಗ | ಹೊಸನಗರ |
| 97. | ಶಿವಮೊಗ್ಗ | ಸಾಗರ |
| 98. | ಶಿವಮೊಗ್ಗ | ಶಿಕಾರಿಪುರ |
| 99. | ಶಿವಮೊಗ್ಗ | ಸೊರಬ |
| 100. | ಶಿವಮೊಗ್ಗ | ತೀರ್ಥಹಳ್ಳಿ |
| 101. | ತುಮಕೂರು | ಚಿಕ್ಕನಾಯಕನಹಳ್ಳಿ |
| 102. | ತುಮಕೂರು | ಕೊರಟಗೆರೆ |
| 103. | ತುಮಕೂರು | ಕುಣಿಗಲ್ |
| 104. | ತುಮಕೂರು | ಮಧುಗಿರಿ |
| 105. | ತುಮಕೂರು | ಪಾವಗಡ |
| 106. | ತುಮಕೂರು | ಶಿರಾ |
| 107. | ತುಮಕೂರು | ತಿಪಟೂರು |
| 108. | ತುಮಕೂರು | ತುರುವೇಕೆರೆ |
| 109. | ಉಡುಪಿ | ಕಾರ್ಕಳ |
| 110. | ಉಡುಪಿ | ಕುಂದಾಪುರ |
| 111. | ಉಡುಪಿ | ಹೆಜಮಾಡಿ (ಕಾಪು) |
| 112. | ಉತ್ತರಕನ್ನಡ | ಅಂಕೋಲ |
| 113. | ಉತ್ತರಕನ್ನಡ | ಭಟ್ಕಳ |
| 114. | ಉತ್ತರಕನ್ನಡ | ಹಳಿಯಾಳ |
| 115. | ಉತ್ತರಕನ್ನಡ | ಜೋಯಿಡಾ |
| 116. | ಉತ್ತರಕನ್ನಡ | ಮುಂಡಗೋಡ |
| 117. | ಉತ್ತರಕನ್ನಡ | ಯಲ್ಲಾಪುರ |
| 118. | ಉತ್ತರಕನ್ನಡ | ಕಾರವಾರ |
| 119. | ವಿಜಯಪುರ | ಇಂಡಿ |
| 120. | ವಿಜಯಪುರ | ಸಿಂದಗಿ |
| 121. | ವಿಜಯನಗರ | ಹೂವಿನಹಡಗಲಿ |
| 122. | ವಿಜಯನಗರ | ಹೊಸಪೇಟೆ |
| 123. | ವಿಜಯನಗರ | ಹರಪನಹಳ್ಳಿ |
| 124. | ಯಾದಗಿರಿ | ಶಹಾಪುರ |
| 125. | ಯಾದಗಿರಿ | ಗುರುಮಿಠಕಲ್ |

# ಅನುಬಂಧ-2

## ಕರ್ನಾಟಕ ರಾಜ್ಯಾದ್ಯಂತ ಹೊಸದಾಗಿ ನಿರ್ಮಿಸಬೇಕಾಗಿರುವ ತಾಲ್ಲೂಕು ಕ್ರೀಡಾಂಗಣಗಳ ವಿವರ

| ಕ್ರ. ಸಂ | ಜಿಲ್ಲೆ | ತಾಲ್ಲೂಕು |
|---|---|---|
| 1. | ಬಾಗಲಕೋಟೆ | ಬಾದಾಮಿ |
| 2. | ಬಾಗಲಕೋಟೆ | ಗುಳೇದಗುಡ್ಡ |
| 3. | ಬಾಗಲಕೋಟೆ | ರಬಕವಿ-ಬನಹಟ್ಟಿ |
| 4. | ವಿಜಯನಗರ | ಕೂಡ್ಲಿಗಿ |
| 5. | ವಿಜಯನಗರ | ಹಗರಿಬೊಮ್ಮನಹಳ್ಳಿ |
| 6. | ಬಳ್ಳಾರಿ | ಕುರುಗೋಡು |
| 7. | ಬಳ್ಳಾರಿ | ಕಂಪ್ಲಿ |
| 8. | ಬೆಳಗಾವಿ | ಮುಡಲಗಿ |
| 9. | ಬೆಳಗಾವಿ | ನಿಪ್ಪಾಣಿ |
| 10. | ಬೆಳಗಾವಿ | ಕಿತ್ತೂರು |
| 11. | ಬೆಳಗಾವಿ | ಯರಗಟ್ಟಿ |
| 12. | ಬೆಳಗಾವಿ | ರಾಮದುರ್ಗ |
| 13. | ಬೆಂಗಳೂರು ನಗರ | ಯಲಹಂಕ |
| 14. | ಬೆಂಗಳೂರು ನಗರ | ಕೆಂಗೇರಿ |
| 15. | ಬೆಂಗಳೂರು ನಗರ | ಕೆ.ಆರ್. ಪುರ |
| 16. | ಬೀದರ್ | ಭಾಲ್ಕಿ |
| 17. | ಬೀದರ್ | ಚಿಟ್ಗುಪ್ಪ |
| 18. | ಬೀದರ್ | ಹುಲಸೂರು |
| 19. | ಬೀದರ್ | ಕಮಲನಗರ |
| 20. | ಚಾಮರಾಜನಗರ | ಯಳಂದೂರು |
| 21. | ಚಿಕ್ಕಬಳ್ಳಾಪುರ | ಗುಡಿಬಂಡೆ |
| 22. | ಚಿಕ್ಕಬಳ್ಳಾಪುರ | ಚೇಳೂರು |
| 23. | ಚಿಕ್ಕಮಗಳೂರು | ಶೃಂಗೇರಿ |
| 24. | ಚಿಕ್ಕಮಗಳೂರು | ಕೊಪ್ಪ |
| 25. | ಚಿಕ್ಕಮಗಳೂರು | ತರೀಕೆರೆ |
| 26. | ಚಿಕ್ಕಮಗಳೂರು | ಅಜ್ಜಂಪುರ |
| 27. | ಚಿಕ್ಕಮಗಳೂರು | ಕಳಸ |
| 28. | ದಕ್ಷಿಣ ಕನ್ನಡ | ಉಳ್ಳಾಲ |
| 29. | ದಕ್ಷಿಣ ಕನ್ನಡ | ಮುಲ್ಕಿ |
| 30. | ದಕ್ಷಿಣ ಕನ್ನಡ | ಬಂಟ್ವಾಳ |
| 31. | ದಕ್ಷಿಣ ಕನ್ನಡ | ಕಡಬ |
| 32. | ದಾವಣಗೆರೆ | ನ್ಯಾಮತಿ |
| 33. | ಧಾರವಾಡ | ಕುಂದಗೋಳ |
| 34. | ಧಾರವಾಡ | ನವಲಗುಂದ |
| 35. | ಧಾರವಾಡ | ಹುಬ್ಬಳ್ಳಿ (ಗ್ರಾ) |
| 36. | ಧಾರವಾಡ | ಹುಬ್ಬಳ್ಳಿ (ನ) |
| 37. | ಗದಗ | ಗಜೇಂದ್ರಗಡ |
| 38. | ಗದಗ | ಲಕ್ಷ್ಮೇಶ್ವರ |
| 39. | ಹಾವೇರಿ | ರಟ್ಟಿಹಳ್ಳಿ |
| 40. | ಹಾಸನ | ಶಾಂತಿಗ್ರಾಮ |
| 41. | ಕಲಬುರಗಿ | ಶಾಹಬಾದ್ |

| | | |
|---|---|---|
| 42. | ಕಲಬುರಗಿ | ಕಾಳಗಿ |
| 43. | ಕಲಬುರಗಿ | ಯಡ್ರಾಮಿ |
| 44. | ಕೊಡಗು | ಕುಶಾಲನಗರ |
| 45. | ಕೊಡಗು | ವಿರಾಜಪೇಟೆ |
| 46. | ಕೊಡಗು | ಭಾಗಮಂಡಲ |
| 47. | ಕೊಪ್ಪಳ | ಕನಕಗಿರಿ |
| 48. | ಕೊಪ್ಪಳ | ಕಾರಟಗಿ |
| 49. | ಕೊಪ್ಪಳ | ಕುಕನೂರು |
| 50. | ಮೈಸೂರು | ಟಿ.ನರಸೀಪುರ |
| 51. | ಮೈಸೂರು | ಸರಗೂರು |
| 52. | ರಾಮನಗರ | ಮಾಗಡಿ |
| 53. | ರಾಮನಗರ | ಚನ್ನಪಟ್ಟಣ |
| 54. | ರಾಮನಗರ | ಹಾರೋಹಳ್ಳಿ |
| 55. | ರಾಯಚೂರು | ಸಿರವಾರ |
| 56. | ರಾಯಚೂರು | ಮಸ್ಕಿ |
| 57. | ಉಡುಪಿ | ಬ್ರಹ್ಮಾವರ |
| 58. | ಉಡುಪಿ | ಬೈಂದೂರು |
| 59. | ಉಡುಪಿ | ಹೆಬ್ರಿ |
| 60. | ಶಿವಮೊಗ್ಗ | ಭದ್ರಾವತಿ |
| 61. | ತುಮಕೂರು | ಗುಬ್ಬಿ |
| 62. | ಉತ್ತರ ಕನ್ನಡ | ಹೊನ್ನಾವರ |
| 63. | ಉತ್ತರ ಕನ್ನಡ | ಕುಮಟಾ |
| 64. | ಉತ್ತರ ಕನ್ನಡ | ದಾಂಡೇಲಿ |
| 65. | ವಿಜಯಪುರ | ಬಸವನ ಬಾಗೇವಾಡಿ |
| 66. | ವಿಜಯಪುರ | ತಾಳಿಕೋಟೆ |
| 67. | ವಿಜಯಪುರ | ದೇವರ ಹಿಪ್ಪರಗಿ |
| 68. | ವಿಜಯಪುರ | ಚಡಚಣ |
| 69. | ವಿಜಯಪುರ | ತಿಕೋಟ |
| 70. | ವಿಜಯಪುರ | ಬಬಲೇಶ್ವರ |
| 71. | ವಿಜಯಪುರ | ಕೊಲ್ಹಾರ್ |
| 72. | ವಿಜಯಪುರ | ನಿಡಗುಂದಿ |
| 73. | ವಿಜಯಪುರ | ಆಲಮೇಲ |
| 74. | ಯಾದಗಿರಿ | ವಡಗೇರಾ |
| 75. | ಯಾದಗಿರಿ | ಹುಣಸಗಿ |